ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 22-01-1970

***ಅಂತಿಮ ಕೋರ್ಸ್ - ಮನಸ್ಸಿನ ಭಾವನೆಗಳನ್ನು ತಿಳಿಯುವುದು***

(अंतिम कोर्स – मन के भावों को जानना)

ಎಲ್ಲರೂ ಎಲ್ಲಿ ಕುಳಿತಿದ್ದೀರಿ ಮತ್ತು ಏನನ್ನು ನೋಡುತ್ತೀದ್ದೀರಿ? ಅವ್ಯಕ್ತ ಸ್ಥಿತಿಯಲ್ಲಿ ಸ್ಥಿತರಾಗಿ ಅವ್ಯಕ್ತ ರೂಪವನ್ನು ನೋಡುತ್ತಿದ್ದೀರೋ ಅಥವಾ ವ್ಯಕ್ತದಲ್ಲಿ ಅವ್ಯಕ್ತನನ್ನು ನೋಡುವ ಪ್ರಯತ್ನ ಮಾಡುತ್ತಿರುವಿರೋ? ಈ ಜಗತ್ತಿನಲ್ಲಿ ಶಬ್ದ ಇದೆ. ಅವ್ಯಕ್ತ ಜಗತ್ತಿನಲ್ಲಿ ಶಬ್ದ ಇಲ್ಲ. ಆದ್ದರಿಂದ ತಂದೆಯೂ ಎಲ್ಲಾ ಮಕ್ಕಳಿಗೆ ಶಬ್ದದಿಂದ ದೂರ ಹೋಗುವ ವ್ಯಾಯಾಮವನ್ನು ಕಲಿಸುತ್ತಿದ್ದಾರೆ. ಒಂದು ಕ್ಷಣದಲ್ಲಿ ಶಬ್ದದಲ್ಲಿ ಬರುವುದು, ಒಂದು ಕ್ಷಣದಲ್ಲಿ ಶಬ್ದದಿಂದ ದೂರವಾಗುವುದು, ಈ ಅಭ್ಯಾಸ ವರ್ತಮಾನ ಸಮಯದಲ್ಲಿ ಬಹಳ ಅವಶ್ಯಕವಾಗಿದೆ. ತಮ್ಮ ಅವ್ಯಕ್ತ ಸ್ಥಿತಿಯಲ್ಲಿ ತಾವು ಎಷ್ಟು  ಸ್ಥಿತರಾಗುವಿರೋ ಅಷ್ಟು ಕಣ್ಣುಗಳ ಸಂಕೇತಗಳಿಂದ ಯಾರದೇ ಮನಸ್ಸಿನ ಭಾವವನ್ನು ತಿಳಿಯುತ್ತೀರಿ. ಯಾರೊಂದಿಗೂ ಮಾತನಾಡುವ ಮತ್ತು ಕೇಳುವ ಆವಶ್ಯಕತೆಯೇ ಇರುವುದಿಲ್ಲ. ಇಂತಹ ಸಮಯ ಈಗ ಬರಲಿದೆ. ಹೇಗೆ ಬಾಪ್ ದಾದಾರ ಬಳಿಗೆ ಬಂದಾಗ ಹೇಳದೆಯೇ ತಮ್ಮ ಮನದ ಸಂಕಲ್ಪಗಳನ್ನು, ಮನಸ್ಸಿನ ಭಾವಗಳನ್ನು ತಿಳಿದುಕೊಳ್ಳುವರೋ, ಹಾಗೆಯೇ ತಾವು ಮಕ್ಕಳೂ ಈಗ ಇದೇ ಕೊನೆಯ ಕೋರ್ಸ್ ಅಧ್ಯಯನ ಮಾಡಬೇಕು. ಮುಖದ ಭಾಷೆ ಎಂದು ಹೇಗೆ ಹೇಳಲಾಗುತ್ತದೆಯೋ ಹಾಗೆಯೇ ಆತ್ಮನ ಭಾಷೆಯೂ ಇದೆ. ಅದನ್ನು ಆತ್ಮಿಕ ಸಂಭಾಷಣೆ ಎಂದು ಹೇಳುತ್ತಾರೆ. ಆತ್ಮರು ಆತ್ಮಗರೊಂದಿಗೆ ಮಾತನಾಡುತ್ತಾರೆ. ಆದರೆ ಹೇಗೆ? ಆತ್ಮರ ಮಾತು ಬಾಯಿಂದ ಬರುತ್ತದೆಯೇ? ಹೇಗೆ ಆತ್ಮಿಕ ಸ್ಥಿತಿಯಲ್ಲಿ ಸ್ಥಿತರಾಗುವಿರೋ ಹಾಗೆ ಆತ್ಮನ ಮಾತುಗಳನ್ನು ಅದೇ ರೀತಿ ಸಹಜ ಮತ್ತು ಸ್ಪಷ್ಟ ತಿಳಿಯುವಿರಿ, ಈ ಜಗತ್ತಿನಲ್ಲಿ ಬಾಯಿಯಿಂದ ವರ್ಣನೆ ಮಾಡುವುದರಿಂದ ಹೇಗೆ ಪರಸ್ಪರರ ಭಾವಗಳನ್ನು ತಿಳಿಯುತ್ತೀರೋ ಹಾಗೆ ತಿಳಿಯಲು ಯಾವ ಧಾರಣೆಯ ಆವಶ್ಯಕತೆಯಿದೆ? *ಸದಾ ಬುದ್ಧಿಯ ಮಾರ್ಗ ಸ್ಪಷ್ಟವಾಗಿರಬೇಕು. ಬುದ್ಧಿ ಅಥವಾ ಮನದಲ್ಲಿ ಯಾವುದೇ ಗೊಂದಲಗಳು ಇದ್ದಾಗ ಲೈನ್ ಸ್ಪಷ್ಟವಾಗಿಲ್ಲದಿದ್ದರೆ ಪರಸ್ಪರರ ಸಂಕಲ್ಪ ಮತ್ತು ಭಾವಗಳನ್ನು ತಿಳಿಯಲಾರಿರಿ. ಏಕೆಂದರೆ ಸಂಕಲ್ಪಗಳ ಮಿಶ್ರಣವಾಗುತ್ತದೆ.* ಆದ್ದರಿಂದ ಪ್ರತಿಯೊಬ್ಬರೂ ತಮ್ಮನ್ನು ತಾವು ನೋಡಿಕೊಳ್ಳಬೇಕು? ತಮ್ಮ ಬುದ್ಧಿಯ ಲೈನ್ ಸ್ಪಷ್ಟವಾಗಿದೆಯೇ? ಬುದ್ಧಿಯಲ್ಲಿ ಯಾವುದೇ ಪ್ರಕಾರದ ವಿಘ್ನ ಸತಾಯಿಸುತ್ತಿಲ್ಲವೇ? ಎಂದು. ಅಖಂಡ, ಅಟಲ, ದಣಿಯದಿರುವುದು ಈ ಮೂರು ವಿಷಯಗಳುನಮ್ಮ ಜೀವನದಲ್ಲಿ ಇರಬೇಕು. ಈ ಮೂರರಲ್ಲಿ ಒಂದರ ಕೊರತೆಯಿದ್ದರೂ, ಬುದ್ಧಿಯ ಮಾರ್ಗ ಸ್ಪಷ್ಟವಾಗಿಲ್ಲವೆಂದು ತಿಳಿಯಿರಿ. ಬುದ್ಧಿಯ ಮಾರ್ಗ ಸ್ಪಷ್ಟವಾಗಿದ್ದಾಗ ಅವರ ಸ್ಥಿತಿ, ಸ್ಮೃತಿ ಹೇಗಿರುವುದು? ಎಷ್ಟೆಷ್ಟು ಬುದ್ಧಿಯ ಮಾರ್ಗ ಎಂದರೆ ಪುರುಷಾರ್ಥದ ಮಾರ್ಗ ಸ್ಪಷ್ಟ ಆಗುವುದೋ ಅಷ್ಟಷ್ಟು ಏನು ಸ್ಮೃತಿಯಲ್ಲಿರುವುದು ? ಯಾವುದೇ ಮಾತಿನಲ್ಲಿ ಅವರ ಮುಂದೆ ವರ್ತಮಾನದ ಸಮಾನ ಭವಿಷ್ಯವೂ ಸ್ಪಷ್ಟವಾಗಿರುವುದು. ಅವರಿಗೆ ವರ್ತಮಾನ ಮತ್ತು ಭವಿಷ್ಯ ಒಂದೇ ಸಮಾನವಾಗಿರುತ್ತವೆ. ಇತ್ತೀಚೆಗೆ ವೈಜ್ಞಾನಿಕ ಸಾಧನಗಳು ದೂರದ ವಸ್ತುಗಳು ಎಷ್ಟು ಸ್ಪಷ್ಟವಾಗಿ ತೋರಿಸುತ್ತವೆ ಎಂದರೆ ದೂರದ ವಸ್ತುವೂ ಸಮೀಪವಿರುವಂತೆ ಕಾಣಿಸುತ್ತದೆ. ಅದೇ ರೀತಿ ಯಾರ ಪುರುಷಾರ್ಥ ಸ್ಪಷ್ಟವಾಗಿದೆಯೋ ಅವರಿಗೆ ಭವಿಷ್ಯದ ಪ್ರತಿಯೊಂದು ಮಾತು ದೂರವಿದ್ದರೂ ಸಮೀಪ ಕಂಡುಬರುತ್ತವೆ. ಹೇಗೆ ದೂರದರ್ಶನದಲ್ಲಿ ನೋಡಿದಾಗ ಎಲ್ಲವೂ ಸ್ಪಷ್ಟವಾಗಿ ಕಂಡುಬರುತ್ತದೆಯೋ ಹಾಗೆ ಅವರ ಬುದ್ಧಿ ಮತ್ತು ಅವರ ದೃಷ್ಟಿ ಟಿ.ವಿ.ಯಂತೆ ಎಲ್ಲ ಮಾತುಗಳನ್ನು ಸ್ಪಷ್ಟವಾಗಿ ನೋಡಬಲ್ಲದು, ತಿಳಿಯಬಲ್ಲದು ಮತ್ತು ಯಾವುದೇ ಮಾತಿನಲ್ಲಿ ಪುರುಷಾರ್ಥವೂ ಕಠಿಣವಾಗುವುದಿಲ್ಲ. ಹಾಗಾದರೆ ಆ ಅನುಭವ, ಆ ಅಂತಿಮ ಸ್ಥಿತಿಯ ಪರಿಶೀಲನೆಯಿಂದ ತಾವು ಎಲ್ಲಿಯವರೆಗೆ ಅಂತಿಮ ಸ್ಥಿತಿಗೆ ಸಮೀಪವಿರುವಿರಿ ಎಂದು ತಮ್ಮನ್ನು ತಾವೇ ನೋಡಿಕೊಳ್ಳಿ. ಸೂರ್ಯ ತನ್ನ ಪೂರ್ಣ ಪ್ರಕಾಶದಲ್ಲಿ ಬಂದಾಗ ಹೇಗೆ ಎಲ್ಲ ವಸ್ತುಗಳು ಸ್ಪಷ್ಟವಾಗಿ ಕಂಡುಬರುವವು, ಕತ್ತಲೆ, ಮಂಜು ಕೂಡಾ ಸಮಾಪ್ತಿಯಾಗುವುದು, ಅದೇ ರೀತಿ ಸರ್ವಶಕ್ತಿವಂತ ಜ್ಞಾನಸೂರ್ಯನ ಜೊತೆಗೆ ನೇರ ಸಂಬಂಧವಿರುವಾಗ ತಮ್ಮಲ್ಲಿ ಈ ಎಲ್ಲ

ವಿಷಯಗಳು ಸ್ಪಷ್ಟವಾಗಿ ಕಂಡುಬರುವವು ಮತ್ತು ಪುರುಷಾರ್ಥದಲ್ಲಿ ಸತ್ಯ ಮಾತುಗಳನ್ನು ಮುಚ್ಚುವಂತಹ ಮಾಯೆಯ ಅಂಧಕಾರ ಅಥವಾ ಮುಸುಕು ದೂರವಾಗುವುದು, ಇದಕ್ಕಾಗಿ ಎರಡು ಮಾತುಗಳನ್ನು ಸದಾ ನೆನಪಿಡಬೇಕು. ಲೌಕಿಕ ತಂದೆ ಮೇಳಕ್ಕೆ ಮಕ್ಕಳನ್ನು ಕರೆದುಕೊಂಡು ಹೋದರೆ ಸ್ನೇಹಿ ಮಕ್ಕಳಿಗೆ ಯಾವುದಾದರೂ ಒಂದು ವಸ್ತುವನ್ನು ಕೊಡಿಸುವರು. ಅದೇ ರೀತಿ ಬಾಪ್ ದಾದಾ ಇಂದಿನ ಈ ಅಮೂಲ್ಯ ಮೇಳದಲ್ಲಿ ಮಕ್ಕಳಿಗೆ ಯಾವ ಅಮೂಲ್ಯವಾದ ವಸ್ತುವನ್ನು ಕೊಡುವರು?

ಇಂದಿನ ಈ ಮಧುರ ಮಿಲನದ ಮೇಳೆಯಲ್ಲಿ ಕುರುಹಾಗಿ ಬಾಪ್ ದಾದಾ ಸದಾ ಶುಭಚಿಂತಕರಾಗಿ ಮತ್ತು ಶುಭಚಿಂತನೆಯಲ್ಲಿರಿ ಎಂಬುದನ್ನು ಕೊಡುತ್ತಿದ್ದಾರೆ. ಈ ಎರಡು ಮಾತುಗಳನ್ನು ಸದಾ ನೆನಪಿಡಿ. ಶುಭ ಚಿಂತನೆಯಿಂದ ತಮ್ಮ ಸ್ಥಿತಿಯನ್ನು ರೂಪಿಸಿಕೊಳ್ಳುವಿರಿ ಮತ್ತು ಶುಭ ಚಿಂತಕರಾಗುವುದರಿಂದ ಅನೇಕ ಆತ್ಮರ ಸೇವೆಯನ್ನೂ ಮಾಡುವಿರಿ. ಆದ್ದರಿಂದ ಇಂದು ವತನದಿಂದ ಬಂದಂತಹ ಎಲ್ಲ ಮಕ್ಕಳಿಗೆ ಇದೇ ಅವಿನಾಶಿ ಉಡುಗೊರೆಯಾಗಿದೆ. ಬಾಪ್ ದಾದಾರ ಸ್ನೇಹ ಜಾಸ್ತಿಯಾಗಿದೆಯೋ ಅಥವಾ ಮಕ್ಕಳದೋ? ನಮ್ಮೆಲ್ಲರ ಸ್ನೇಹ ಬಾಪ್ ದಾದಾರಿಗಿಂತ ಹೆಚ್ಚಿದೆ ಎಂದು ಕೆಲವು ಮಕ್ಕಳು ಯೋಚಿಸುತ್ತಿರಬಹುದು. ಕೆಲವರಿದ್ದಾರೆ ಆದರೆ ಬಹುಸಂಖ್ಯೆಯಲ್ಲಿ ಇಲ್ಲ. ಸ್ನೇಹವಿದೆ ಆದರೆ ಅಖಂಡ ಮತ್ತು ಏಕರಸ ಸ್ನೇಹವಿಲ್ಲ. ಮಕ್ಕಳ ಸ್ನೇಹದ ರೂಪ ಬಹಳ ಬದಲಾಗುತ್ತಿದೆ. ಬಾಪ್ ದಾದಾರ ಸ್ನೇಹ ಅಖಂಡ ಮತ್ತು ಏಕರಸ ಆಗಿರುತ್ತದೆ. ಹಾಗಾದರೆ ಈಗ ಹೇಳಿ ಯಾರ ಸ್ನೇಹ ಹೆಚ್ಚಿದೆ? ಬಾಪ್ ದಾದಾ ಮಕ್ಕಳನ್ನು ನೋಡುವಾಗ ತ್ರಿನೇತ್ರಿಯಾದ ಕಾರಣ ಮೂರು ರೂಪಗಳಿಂದ ನೋಡುತ್ತಾರೆ. ಆ ಮೂರು ರೂಪಗಳು ಯಾವವು? ತಾವು ತಂದೆಯನ್ನು ಮೂರು ರೂಪಗಳಿಂದ ನೋಡುವುದನ್ನು ತಿಳಿದಿದ್ದೀರಿ. ಆದರೆ ತಂದೆ ಮಕ್ಕಳನ್ನು ಮೂರು ರೂಪಗಳಿಂದ ನೋಡುತ್ತಾರೆ ಒಂದು ಪುರುಷಾರ್ಥಿರೂಪ, ಎರಡನೇಯದು ಈಗಿನ ಸಂಗಮದ ಭವಿಷ್ಯ ಫರಿಸ್ತಾ ರೂಪ ಮತ್ತು ಮೂರನೆಯದು ಭವಿಷ್ಯದ ದೇವತಾ ರೂಪ. ಮೂರರ ಸಾಕ್ಷಾತ್ಕಾರ ಆಗುತ್ತಿರುತ್ತದೆ. ವರ್ತಮಾನದ ಈ ದೇಹದ ರೂಪ ಈ ಕಣ್ಣುಗಳಿಂದ ಸ್ಪಷ್ಟವಾಗಿ ಕಂಡು ಬರುವಂತೆ ಈ ಮೂರರ ಒಂದೊಂದು ರೂಪ ಸ್ಪಷ್ಟವಾಗಿ ಕಂಡು ಬರುತ್ತವೆ. ಕೇಳಿದಂತಹ ಮಾತುಗಳನ್ನು ವರ್ಣನೆ ಮಾಡುವುದು ಕಠಿಣ ಆದರೆ ಈ ಕಣ್ಣುಗಳಿಂದ ನೋಡಿದಂತಹ ವಸ್ತುಗಳನ್ನು ಹೇಗೆ ವರ್ಣನೆ ಮಾಡುವುದು ಸಹಜ ಮತ್ತು ಸ್ಪಷ್ಟವಾಗಿದೆಯೋ ಹಾಗೆಯೇ ಈ ದಿವ್ಯ ಕಣ್ಣುಗಳಿಂದ ಅಥವಾ ಅವ್ಯಕ್ತ ಕಣ್ಣುಗಳಿಂದ ಪ್ರತಿಯೊಬ್ಬರ ಮೂರು ರೂಪಗಳನ್ನು ಅಷ್ಟೇ ಸಹಜವಾಗಿ ವರ್ಣನೆ ಮಾಡಬಹುದು. ಅದೇ ರೀತಿ ತಮ್ಮೆಲ್ಲರಿಗೂ ಪರಸ್ಪರರ ಮೂರು ರೂಪಗಳು ಕಂಡುಬರುವವು. ಈಗ ಯೋಗ್ಯತೆಯನುಸಾರ, ಶಕ್ತಿಯನುಸಾರವಿದೆ ಆದರೆ ಸ್ವಲ್ಪ ಸಮಯದ ನಂತರ ಈ ಶಕ್ತಿಯನುಸಾರ ಶಬ್ದವೂ ಸಮಾಪ್ತಿಯಾಗುವುದು ಮತ್ತು ಪ್ರತಿಯೊಬ್ಬರೂ ತಮ್ಮ ನಂಬರ್ ಅನುಸಾರ ಸಂಪೂರ್ಣತೆಯನ್ನು ಪಡೆದುಕೊಳ್ಳುವರು. ಆದ್ದರಿಂದ ಬಾಪ್ ದಾದಾ ತಮ್ಮೆಲ್ಲರ ಸಂಪೂರ್ಣ ಮುಖವನ್ನು ನೋಡುತ್ತಾರೆ. ಸಂಪೂರ್ಣತೆ ನಂಬರವಾರ್ ಆಗಿರಬಹುದು. ಮಾಲೆಯ ನಂಬರವಾರ್ 108 ಮಣಿಗಳಲ್ಲಿ ಒಂದನೆಯ ಮತ್ತು 108ನೆಯ ಮಣಿಯನ್ನು ಸಂಪೂರ್ಣವೆಂದು ಹೇಳುವಿರೋ ಇಲ್ಲವೋ? ವಿಜಯಿ ರತ್ನವೆಂದು ಹೇಳುವಿರಾ? ವಿಜಯಿರತ್ನ ಎಂದರೆ ತಮ್ಮ ನಂಬರ್ ಪ್ರಮಾಣ ಸಂಪೂರ್ಣತೆಯನ್ನು ಪ್ರಾಪ್ತಿಮಾಡಿಕೊಳ್ಳುವುದು. ಅವರಿಗೆ ಇಡೀ ನಾಟಕದಲ್ಲಿ ಅದೇ ಸಂಪೂರ್ಣತೆಯ ಮೊದಲ ದರ್ಜೆಯಾಗಿರುತ್ತದೆ. ಎಂಟನೇಯವರನ್ನೂ ಸತ್ಯಯುಗದಲ್ಲಿ ವಿಶ್ವಮಹಾರಾಜನೆಂದು ಕರೆಯಲಾಗುತ್ತದೆ. ಆದರೆ ಮೊದಲ ವಿಶ್ವಮಹಾರಾಜನ ಸೃಷ್ಟಿಯ ಸಂಪೂರ್ಣ ಸುಖ ಮತ್ತು ಎಂಟನೆಯವರ ಸಂಪೂರ್ಣತೆಯ ಸುಖದಲ್ಲಿ ಅಂತರ ಇರುವುದಲ್ಲವೇ? ಅದೇ ರೀತಿ ಇಲ್ಲಿ ಪ್ರತಿಯೊಬ್ಬರೂ ತಮ್ಮ ನಂಬರ್ ಪ್ರಮಾಣ ಸಂಪೂರ್ಣತೆಯನ್ನು ಪಡೆಯುವರು. ಆದ್ದರಿಂದ ಬಾಪ್ ದಾದಾ ಈಗ ಏನಿದ್ದಾರೆ ಮತ್ತು ಏನಾಗುತ್ತಾರೆ ಎಂದು ಸಂಪೂರ್ಣ ಸ್ಥಿತಿಯನ್ನು ಮತ್ತು ವರ್ತಮಾನ ಪುರುಷಾರ್ಥವನ್ನು ನೋಡುತ್ತಿರುತ್ತಾರೆ. ವತನದಲ್ಲಿ ಕುಳಿತು ಏನು ಮಾಡುತ್ತಿರುತ್ತೀರಿ. ಎಂದು ಕೇಳಿದಿರಲ್ಲವೇ? ಇದನ್ನೇ ನೋಡುತ್ತಿರುತ್ತೇವೆ ಮತ್ತು ಅವ್ಯಕ್ತ ಸಹಯೋಗ - ಕೊಡುವ ಸೇವೆ ಮಾಡುತ್ತಿರುತ್ತೇವೆ. ಬಾಪ್ ದಾದಾ ವತನದಲ್ಲಿ ಕುಳಿತು ಏನು ಮಾಡುತ್ತಾರೋ ಏನೋ ಗೊತ್ತಿಲ್ಲ ಎಂದು ತಿಳಿಯುತ್ತೀರಿ ಆದರೆ ಸೇವೆಯ ಗತಿ ಸಾಕಾರ ವತನಕ್ಕಿಂತ ಅಲ್ಲಿ ತೀವ್ರವಾಗಿದೆ ಏಕೆಂದರೆ ಇಲ್ಲಿ ಸಾಕಾರ ತನುವಿನ ಲೆಕ್ಕಾಚಾರವೂ ಜೊತೆಗಿತ್ತು. ತನಗಾಗಿ ಅಲ್ಲದಿದ್ದರೂ ಎಲ್ಲ ಆತ್ಮರಿಗಾಗಿ ಈಗ ಈ ಬಂಧನದಿಂದ ಮುಕ್ತರಾಗಿದ್ದಾರೆ. ಈ ಶರೀರವನ್ನು ಬಿಡುವುದು ಮತ್ತು

ಶರೀರವನ್ನು ಪಡೆಯುವ ಅನುಭವ ಹೇಗೆ ಎಲ್ಲರಿಗಿದೆಯೋ ಅದೇ ರೀತಿ ಬೇಕಾದಾಗ ಶರೀರದ ಭಾವನೆ ಸಂಪೂರ್ಣ ದೂರವಾಗಿ ಅಶರೀರಿಯಾಗುವ ಮತ್ತು ಯಾವಾಗ ಬೇಕೋ ಆಗ ಶರೀರದ ಆಧಾರವನ್ನು ಪಡೆದು ಕರ್ಮ ಮಾಡುವ ಅನುಭವವಿದೆಯಾ? ಈ ಅನುಭವವನ್ನು ಈಗ ವೃದ್ಧಿ ಮಾಡಿಕೊಳ್ಳಿ. *ಈ ಸ್ಥೂಲ ವಸ್ತ್ರವೇ ಬೇರೆ ಮತ್ತು ಈ ವಸ್ತ್ರವನ್ನು ಧಾರಣೆ ಮಾಡುವ ಆತ್ಮೀವೇ ಬೇರೆ, ಎಂಬ ಅನುಭವ ಸಂಪೂರ್ಣ ವಾಗುವುದು. ಈ ಅನುಭವ ಈಗ ಹೆಚ್ಚಾಗಬೇಕಾಗಿದೆ* ಈಗ ಹೋದೆವು ಎಂದರೆ ಹೋದೆವು ಎಂಬುದನ್ನು ಸದಾ ನೆನಪಿಟ್ಟುಕೊಳ್ಳಿ ಕೇವಲ ಸೇವೆಗಾಗಿ ನಿಮಿತ್ತ ಶರೀರದ ಆಧಾರ ತೆಗೆದುಕೊಂಡಿದ್ದೇನೆ ಆದರೆ ಸೇವೆ ಸಮಾಪ್ತಿಯಾಗುತ್ತಿದ್ದಂತೆ ತಮ್ಮನ್ನು ಪೂರ್ಣ ಹಗುರಮಾಡಿಕೊಳ್ಳಬಹುದು. ತಾವು ಯಾವುದಾದರೂ ಡ್ಯೂಟಿಗೆ ಹೋಗಿ ಹಿಂತಿರುಗಿ ಮನೆಗೆ ಬಂದಾಗ ತಮ್ಮಲ್ಲಿ ಹಗುರತೆಯನ್ನು ಅನುಭವ ಮಾಡುತ್ತೀರಿ. ಮತ್ತು ಡ್ಯೂಟಿ ಉಡುಪನ್ನು ಬದಲಿಸಿ, ಮನೆಯ ಉಡುಪನ್ನು ಧರಿಸುತ್ತೀರಿ. ಅದೇ ರೀತಿ ಈ ಶರೀರ ರೂಪಿ ವಸ್ತ್ರದ ಆಧಾರ ಪಡೆದು ಸೇವೆಯನ್ನು ಮಾಡಿ, ಸೇವೆಗಾಗಿ ಈ ಶರೀರವೆಂಬ ವಸ್ತ್ರದ ಆಧಾರ ತೆಗೆದುಕೊಳ್ಳಿ ನಂತರ ಸೇವೆ ಸಮಾಪ್ತಿಯಾಯಿತು ಮತ್ತು ಈ ವಸ್ತ್ರಗಳ ಹೊರೆಯಿಂದ ಹಗುರ ಮತ್ತು ಅಲಿಪ್ತರಾಗಿರುವ ಪ್ರಯತ್ನ ಮಾಡಿರಿ. ಒಂದು ಕ್ಷಣದಲ್ಲಿ ವಸ್ತ್ರದಿಂದ ಭಿನ್ನರಾಗುವಿರಾ? ವಸ್ತ್ರ ಬಿಗಿಯಾಗಿದ್ದರೆ ಬೇರೆಯಾಗಲಾಗುವುದಿಲ್ಲ. ಯಾವುದೇ ವಸ್ತು ಅಂಟಿಕೊಂಡಿದ್ದರೆ ಅದನ್ನು ಬಿಚ್ಚುವುದು ಕಷ್ಟವಾಗುತ್ತದೆ. ಸಡಿಲವಾಗಿರುವುದರಿಂದ ಸಹಜವಾಗಿ ಬೇರೆಯಾಗುತ್ತದೆ. ಅದೇ ರೀತಿ ಒಂದು ವೇಳೆ ತಮ್ಮ ಸಂಸ್ಕಾರಗಳಲ್ಲಿ ಯಾವುದೇ ಸಹಜತೆ ಇಲ್ಲದಿದ್ದರೆ ಆಗ ಆಶರೀರಿತನದ ಅನುಭವ ಮಾಡಲಾರಿರಿ. ಏನಾಗಬೇಕೆಂದು ಈಗಾಗಲೇ ಹೇಳಿದ್ದೇವಲ್ಲವೇ? ಸಹಜ ಎಂದರೆ ಮಾಯೆಯೂ ಸಹಜವಾಗಿ ಬರುವಷ್ಟಲ್ಲ. ಸಹಜವಾಗಿರಿ ಆದರೆ ಸದಾ ಜಾಗೃತವಾಗಿರಿ (easy & alert). ಈ ರೀತಿ ಇರುವವರೇ ಈ ಅಭ್ಯಾಸದಲ್ಲಿ ಇರಬಹುದು. ಬಾಪ್ ದಾದಾ ಮಕ್ಕಳನ್ನು ಹೊಸದಾಗಿ ನೋಡುತ್ತಿಲ್ಲ. ಏಕೆಂದರೆ ಮೂರು ಕಾಲಗಳನ್ನು ತಿಳಿದಾಗ ಹೊಸದೇನಿದೆ? ಆದ್ದರಿಂದ ಎಲ್ಲರೂ ಅತಿ ಪುರಾತನದವರಾಗಿದ್ದೀರಿ. ಎಷ್ಟು ಹಳಬರಾಗಿದ್ದೀರಿ ಎಂಬ ಲೆಕ್ಕವನ್ನು ಮಾಡಲಾಗುವುದಿಲ್ಲ. ಅದಕ್ಕಾಗಿ ತಮ್ಮನ್ನು ಹೊಸಬರು ಎಂದು ತಿಳಿಯಬೇಡಿ, ಬಹಳ ಹಳಬರಾಗಿದ್ದೀರಿ ಮತ್ತು ಆ ಹಳಬರೇ ಈಗ ಮತ್ತೆ ತಮ್ಮ ಅಧಿಕಾರವನ್ನು ಪಡೆಯಲು ಬಂದಿರುವಿರಿ. ಈ ನಡೆ ಸದಾ ಕಾಯಂ ಇರಲಿ, ಪುರುಷಾರ್ಥ ಮಾಡುವೆವು, ನೋಡುವೆವು ಎಂದು ಸಹ ಎಂದಿಗೂ ಹೇಳಬೇಡಿ, ಯಾರು ಕೊನೆಗೆ ಬಂದಿರುವವರೋ ಅವರು ನಾವು ತೀವ್ರಗತಿಯಿಂದ ಹೋಗುವೆವು ಎಂದು ಯೋಚಿಸಬೇಕು. ತೀವ್ರಗತಿಯ ಗುರಿಯಿಟ್ಟುಕೊಂಡರೆ ಪುರುಷಾರ್ಥವೂ ಅದೇ ತರಹ ಆಗುವುದು. ಆದ್ದರಿಂದ ಎಂದಿಗೂ ನಾವು ಕೊನೆಗೆ ಬಂದಿರುವೆವು, ಆದ್ದರಿಂದ ಪ್ರಜೆಗಳಾಗುವೆವು ಎಂದು ಯೋಚಿಸಬಾರದು. ಕೊನೆಯಲ್ಲಿ ಬರುವವರಿಗೂ ರಾಜ್ಯ ಪದವಿಯನ್ನು ಪಡೆಯುವ ಅಧಿಕಾರವಿದೆ.

ಅವ್ಯಕ್ತ ಭೇಟಿಯೂ ಮಿಲನವೇ ಆಗಿದೆ. ಆದ್ದರಿಂದ ಎಲ್ಲರಿಗೂ ನಾವು ರಾಜ್ಯಪದವಿಯನ್ನು ಪಡೆದೇ ಪಡೆಯುತ್ತೇವೆ ಎಂಬ ನಿಶ್ಚಯ ಮತ್ತು ನಶೆಯಿರಲಿ. ನಾವಾಗದಿದ್ದರೆ ಯಾರಾಗುವರು? ಕೋಟಿಯಲ್ಲಿ ಕೆಲವರು ಎಂದು ಎಂತಹ ಆತ್ಮರು ಎಣಿಕೆ ಮಾಡಲ್ಪಟ್ಟಿದ್ದಾರೆ? ಈ ರೀತಿಯ ಕೋಟಿಯಲ್ಲಿ ಕೆಲವರು ನಾವಾತ್ಮರೇ ನಾಟಕದಲ್ಲಿ ಇದ್ದೇವೆ. ಬಾಪ್ ದಾದಾ ಎಲ್ಲ ಮಕ್ಕಳ ಭವಿಷ್ಯವನ್ನು ನೋಡಿ ಖುಷಿ ಪಡುತ್ತಾರೆ. ಒಬ್ಬೊಬ್ಬರ ಜೊತೆಗೆ ಮಿಲನ ಮಾಡುವುದು ಮನಸ್ಸಿನ ಮಾತಾಗಿದೆ. ಆದರೆ ತಮ್ಮೆಲ್ಲರ ಸಮಾನ ಈ ವ್ಯಕ್ತ ಪ್ರಪಂಚದಲ್ಲಿ....... ಬಾಪ್ ದಾದಾರಿಗೆ ಈಗ ಈ ವ್ಯಕ್ತ ಪ್ರಪಂಚವಿಲ್ಲ. ಆದರೆ ತಾವು ಈ ಪ್ರಪಂಚದಂತೆ ಸಮಯವನ್ನೂ ನೋಡಬೇಕಾಗುತ್ತದೆ. ವತನದಲ್ಲಿ ಸಮಯದ ಮಾತೇ ಇರುವುದಿಲ್ಲ, ಗಡಿಯಾರವಿರುವುದಿಲ್ಲ. ಆದರೆ ಈ ವ್ಯಕ್ತ ಪ್ರಪಂಚದಲ್ಲಿ ಈ ಎಲ್ಲ ವಿಷಯಗಳನ್ನು ನೋಡಬೇಕಾಗುತ್ತದೆ. ಅಲ್ಲಿ ಸೂರ್ಯ, ಚಂದ್ರರೇ ಇಲ್ಲವೆಂದ ಮೇಲೆ ಹಗಲು ರಾತ್ರಿಯ ಮಾತೇ ಇಲ್ಲ. ಆದ್ದರಿಂದ ಸಮಯದ ಬಂಧನವಿಲ್ಲ.

ಅವ್ಯಕ್ತ ಮುರಳಿ 22-01-1970.

*ಅಂತಿಮ ಕೋರ್ಸ್ - ಮನಸ್ಸಿನ ಭಾವನೆಗಳನ್ನು ತಿಳಿಯುವುದು*

"ಎಷ್ಟು ಅವ್ಯಕ್ತ ಸ್ಥಿತಿಯಲ್ಲಿ ಸ್ಥಿತರಾಗುತ್ತಿರೋ ಅಷ್ಟು ಕಣ್ಣುಗಳ ಸಂಕೇತಗಳಿಂದ ಎಲ್ಲರ ಮನಸ್ಸಿನ ಭಾವನೆಗಳನ್ನು ತಿಳಿಯುತ್ತೀರಿ" ಎಂದು ಶಿವ ತಂದೆ ಹೇಳುತ್ತಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿ ಇದ್ದು ಮನನ ಚಿಂತನೆ ಮಾಡಿ ಧಾರಣೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಸುಖ ಸ್ವರೂಪ, ಶಿವಪರಮಾತ್ಮ ನನ್ನ ತಂದೆ.

1. ನಾನು ಅವ್ಯಕ್ತ ಸ್ಥಿತಿಯಲ್ಲಿದ್ದು ಅವ್ಯಕ್ತ ರೂಪವನ್ನು ನೋಡುತ್ತಿದ್ದೇನೆ.

2. ನಾನು ಧ್ವನಿಗೆ ಅತೀತವಾಗಿ ಇದ್ದೇನೆ.

3. ನಾನು ಕಣ್ಣುಗಳ ಸಂಕೇತದಿಂದ ಯಾರ ಮನಸ್ಸಿನಲ್ಲಿರುವ ಸಂಕಲ್ಪವನ್ನಾದರೂ, ಭಾವನೆಯನ್ನಾದರೂ ತಿಳಿಯಬಲ್ಲ ಅಂತಿಮ ಕೋರ್ಸ್ ಅನ್ನು ಪೂರ್ಣಗೊಳಿಸಿದ್ದೇನೆ.

4. ನಾನು ಸದಾ ಬುದ್ಧಿಲೈನನ್ನು ಸ್ಪಷ್ಟವಾಗಿ ಇಟ್ಟುಕೊಂಡು ಆತ್ಮಿಕ ಸಂಭಾಷಣೆ ಮಾಡಿ ಎಲ್ಲರ ಮನಸ್ಸಿನ ಸಂಕಲ್ಪಗಳನ್ನು, ಭಾವನೆಗಳನ್ನು ತಿಳಿದುಕೊಂಡಿದ್ದೇನೆ.

5. ನಾನು ಆತ್ಮಿಕ ಸ್ಥಿತಿಯಲ್ಲಿದ್ದು ಆತ್ಮರ ವಿಷಯಗಳನ್ನು ಸಹಜವಾಗಿ ಮತ್ತು ಸ್ಪಷ್ಟವಾಗಿ ತಿಳಿದುಕೊಂಡಿದ್ದೇನೆ.

6. ನಾನು ಅಖಂಡ, ಸ್ಥಿರವಾದ, ದಣಿವರಿಯದ - ಈ ಮೂರು ವಿಷಯಗಳನ್ನು ಧಾರಣೆ ಮಾಡಿ ಬುದ್ಧಿ ಲೈನನ್ನು ಸ್ಪಷ್ಟ ಮಾಡಿಕೊಂಡು ವರ್ತಮಾನ ಮತ್ತು ಭವಿಷ್ಯವನ್ನು ಸ್ಪಷ್ಟವಾಗಿ ತಿಳಿದುಕೊಂಡಿದ್ದೇನೆ.

7. ನಾನು ಬುದ್ಧಿ ಮತ್ತು ದೃಷ್ಟಿಯಿಂದ ಟಿವಿಯಲ್ಲಿ ಕಾಣಿಸುವಂತೆ ಎಲ್ಲಾ ವಿಷಯಗಳನ್ನು ನೋಡಿ, ಎಲ್ಲಾ ವಿಷಯಗಳಲ್ಲಿ ಪುರುಷಾರ್ಥವನ್ನು ಸಹಜವಾಗಿ ಮಾಡಿಕೊಂಡು ಅಂತಿಮ ಸ್ಥಿತಿಗೆ ತಲುಪಿದ್ದೇನೆ.

8. ನಾನು ಸರ್ವಶಕ್ತಿವಂತನು, ಜ್ಞಾನ ಸೂರ್ಯನೊಂದಿಗೆ (ಪರಮಾತ್ಮ) ಅಖಂಡ ಸಂಬಂಧವನ್ನಿಟ್ಟು, ಪ್ರತಿ ವಿಷಯವನ್ನು ಸ್ಪಷ್ಟವಾಗಿ ನೋಡುತ್ತಾ ಮಾಯೆಯ ಅಂಧಕಾರ ಮತ್ತು ಮಂಜನ್ನು ಸಮಾಪ್ತಿ ಮಾಡಿದ್ದೇನೆ.

9. ನಾನು ತಂದೆಯಿಂದ 'ಶುಭ ಚಿಂತನೆ ಮತ್ತು ಶುಭ ಚಿಂತಕರು' ಎಂಬ ಎರಡು ಅವಿನಾಶಿ ಉಡುಗೊರೆಗಳನ್ನು ಹೊಂದಿ ಶುಭ ಚಿಂತನೆಯಿಂದ ಸ್ಥಿತಿಯನ್ನು ತಯಾರಿಸಿಕೊಂಡು, ಶುಭ ಚಿಂತಕನಾಗಿ ಅನೇಕರ ಸೇವೆ ಮಾಡಿದ್ದೇನೆ.

10. ನಾನು ತಂದೆಯ ಸಮಾನವಾದ ಅಖಂಡ ಮತ್ತು ಏಕರಸ ಸ್ನೇಹ ಸ್ವರೂಪ.

11. ನನಗೆ ದಿವ್ಯ ನೇತ್ರದಿಂದ ಮೂರು ರೂಪಗಳು ಅರ್ಥಾತ್ • ಪುರುಷಾರ್ಥಿ ರೂಪ

• ಈಗಿನ ಸಂಗಮ ಯುಗೀ  ಫರಿಶ್ತಾ ರೂಪ

• ಭವಿಷ್ಯ ದೇವತಾ ರೂಪ ಈ ಮೂರನ್ನು ಸ್ಪಷ್ಟ ಮಾಡಿಕೊಂಡಿದ್ದೇನೆ.

12. ನಾನು ಸೃಷ್ಟಿಯ ಸಂಪೂರ್ಣ ಸುಖವನ್ನು ಹೊಂದುವ ವಿಶ್ವ ಮಹಾರಾಜನು ಮತ್ತು ವಿಜಯೀ ರತ್ನ.

13. ನಾನು ಈಗಲೇ ಶರೀರವನ್ನು ಆಧಾರವಾಗಿಸಿಕೊಂಡು ಕರ್ಮ ಮಾಡಿ ಹಿಂತಿರುಗಿ ಅಶರೀರಿ ಸ್ಥಿತಿಯಲ್ಲಿ ಬರುವ ಅನುಭವೀಸ್ವರೂಪ.

14. ನಾನು ಸ್ಥೂಲ ವಸ್ತ್ರ (ಶರೀರ) ಬೇರೆ, ಸ್ಥೂಲ ವಸ್ತ್ರವನ್ನು ಧರಿಸುವ ಆತ್ಮ ಬೇರೆ ಎಂಬ ಅನುಭವ ಮಾಡಿದ್ದೇನೆ.

15. ನಾನು ಸಂಸ್ಕಾರದ ಸಡಿಲತೆಯಿಂದ ಅಶರೀರಿ ಸ್ಥಿತಿಯನ್ನು ಅನುಭವ ಮಾಡಿದ್ದೇನೆ.

16. ನಾನು ಶರೀರ ರೂಪಿ ವಸ್ತ್ರವನ್ನು ಆಧಾರವಾಗಿ ತೆಗೆದುಕೊಂಡು ಸೇವೆ ಮುಗಿದ ನಂತರ ಒಂದು ಕ್ಷಣದಲ್ಲಿ ಈ ವಸ್ತ್ರಗಳ ಹೊರೆಯಿಂದ ಹಗುರವಾಗುವ ಮತ್ತು ಅತೀತವಾಗುವ ಅಭ್ಯಾಸ ಮಾಡಿದ್ದೇನೆ.

17. ನಾನು ಸದಾ ಸಹಜವಾಗಿ ಮತ್ತು ಜಾಗೃತವಾಗಿ ಇದ್ದೇನೆ.

18. ನಾನು ತಂದೆಯಿಂದ ಪುನಃ ಹಕ್ಕನ್ನು ಪಡೆಯಲು ಬಂದಿರುವ ಪುರಾತನ ಮಗು.

19. ನಾನು ಹಿಂದೆ ಬಂದರೂ ವೇಗವಾಗಿ ಮುಂದಕ್ಕೆ ಹೋಗುವ ಲಕ್ಷ್ಯವನ್ನು ಧಾರಣೆ ಮಾಡಿರುವ ಪುರುಷಾರ್ಥಿ.

20. ನಾನು ರಾಜ್ಯ ಪದವಿಯನ್ನು ಪಡೆಯುವ ನಿಶ್ಚಯ ಬುದ್ಧಿ ಸ್ವರೂಪ.